

# ಬೃಹತ್ ಈಜುಗೊಳ

ಮಾನವ ತನ್ನ ಕನಸಿನಲ್ಲಿಯೂ ಸಹ ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲದಂತಹ ಈಜುಕೊಳ ಚಿಲಿ ದೇಶದ ಸ್ಯಾಂಟಿಯಾಗೊ ಸಮೀಪ ಇರುವ ಸ್ಯಾನ್ ಅಲ್ಫೊನ್ಸೊ ಡೆಲ್ ಮಾರ್ ರೆಸಾರ್ಟ್‌ನಲ್ಲಿದೆ.

ಇದರ ಉದ್ದ 3000 ಅಡಿ (900 ಮೀಟರ್) ಮತ್ತು ಆಳ 115 ಅಡಿ (35 ಮೀಟರ್). ಇದು ವಿಶ್ವದ ಎರಡನೇ ಅತಿ ಉದ್ದದ ಈಜುಗೊಳವಾಗಿದೆ. 20 ಎಕರೆ ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ಇದರಲ್ಲಿ 66 ದಶಲಕ್ಷ ಗ್ಯಾಲನ್ ನೀರು ಹಿಡಿಯುತ್ತದೆ. ಇದನ್ನು ನಿರ್ಮಿಸಲು ಐದು ವರ್ಷ ಕಾಲ ಹಿಡಿದು 600 ಕೋಟಿ ರೂಪಾಯಷ್ಟು ಹಣ ಖರ್ಚಾಗಿದೆ. ರೆಸಾರ್ಟ್ ಮತ್ತು ಈಜುಗೊಳವನ್ನು ನಿರ್ವಹಿಸಲು ವಾರ್ಷಿಕ 12 ಕೋಟಿ ರೂಪಾಯಿ ಬೇಕು. ಸಮುದ್ರದ ನೀರನ್ನು ಈಜುಗೊಳಕ್ಕೆ ಬಳಸಲಾಗುತ್ತದೆ. ಸಮುದ್ರದ ನೀರನ್ನು ಪಂಪ ಮತ್ತು ಶುದ್ದೀಕರಿಸಲು ಅತ್ಯಾಧುನಿಕ ವ್ಯವಸ್ಥೆಯನ್ನು ಬಳಸಲಾಗುತ್ತಿದೆ. ಯಾವುದೇ ರಾಸಾಯನಿಕವನ್ನು ಶುದ್ಧೀಕರಣ ವ್ಯವಸ್ಥೆಯಲ್ಲಿ ಬಳಸದೇ ಇರುವದರಿಂದ ಈಜುಗೊಳದ ನೀರು ಅತ್ಯಂತ ಸುರಕ್ಷಿತ. ಇದು ಒಲಂಪಿಕ್ಸ್‌ನ 20 ಈಜುಗೊಳಗಳಷ್ಟು ಸಮಾನ ಗಾತ್ರ ಹೊಂದಿದೆ. ಇದನ್ನು 2006 ರಲ್ಲಿ ಕ್ರಿಸ್ಟಲ್ ಲ್ಯಾಗೂನ್ ಎಂಬ ಕಂಪನಿಯ ಮಾಲಿಕತ್ವದಲ್ಲಿ ಅಭಿವೃದ್ಧಿಪಡಿಸಲಾಯಿತು.

ಈಜುಗೊಳದ ಪಕ್ಕದಲ್ಲಿ ನಿರ್ಮಿಸಲಾಗಿರುವ ಐಷಾರಾಮಿ ಹೋಟೆಲ್ ಹನ್ನೊಂದು ಬ್ಲಾಕ್ ಒಳಗೊಂಡಿದೆ. ಈ ಹೋಟೆಲ್‌ನಲ್ಲಿ ಒಂದು ಸಾದಾ ರೂಮಿನ ಒಂದು ದಿನದ ಬಾಡಿಗೆ ಅಂದರೆ ಬರಿ 42 ಲಕ್ಷ ರೂಪಾಯಿ .



★ ರವಿಶಂಕರ ವಿ. ಕೋರಗಲ್